# ಬೋಧಕರ ವಿವರ

೧. ಹೆಸರು : ಡಾ.ಸಿ.ಮಹದೇವ

೨. ಜನ್ಮ ದಿನಾಂಕ : ೧೦.೧೦.೧೯೫೮

೩. ವಿದ್ಯಾರ್ಹತೆ : ಎಂ.ಎ., ಪಿಎಚ್.ಡಿ., ಡಿಪ್ ಇನ್ ಎಪಿಗ್ರಾಫಿ

೪. ವಿಳಾಸ : ಪ್ರಾಧ್ಯಾಪಕ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬

೫. ಸ್ಥಿರ ದೂರವಾಣಿ ಸಂಖ್ಯೆ : ೦೮೨೩೬ ೨೫೩೬೬೬

೬. ಮೊಬೈಲ್ ಸಂಖ್ಯೆ : ೯೪೪೮೦೦ ೫೪೧೦೬

೭. ಫ್ಯಾಕ್ಸ್ ಸಂಖ್ಯೆ :

೮. ಇ-ಮೇಲ್ ವಿಳಾಸ :

೯. ಕಾರ್ಯನಿರ್ವಹಿಸುತ್ತಿರುವ ವಿಭಾಗ : ಪ್ರಾಧ್ಯಾಪಕ, ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ವಿದ್ಯಾರಣ್ಯ ೫೮೩ ೨೭೬

೧೦. ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಹುದ್ದೆ : ಪ್ರಾಧ್ಯಾಪಕ

೧೧. ವಿಷಯ ತಜ್ಞತೆ

೧. ಕರ್ನಾಟಕ ಇತಿಹಾಸ ೪.
೨. ಕರ್ನಾಟಕ ಸಂಸ್ಕೃತಿ ೫.
೩. ಕರ್ನಾಟಕ ಪುರಾತತ್ವ ೬.

೧೨. ಅಧ್ಯಯನ ನಡೆಸುತ್ತಿರುವ ಆಸಕ್ತಿಯ ಕ್ಷೇತ್ರಗಳು

೧. ಕರ್ನಾಟಕ ಕಲೆ ಮತ್ತು ವಾಸ್ತುಶಿಲ್ಪ ೪.
೨. ಕರ್ನಾಟಕ ರಾಜಕೀಯ ಇತಿಹಾಸ ೫.
೩. ಕರ್ನಾಟಕ ಸಾಂಸ್ಕೃತಿಕ ಇತಿಹಾಸ ೬.

೧೩. ಯೋಜನೆಗಳ ವಿವರ

೧೩.೧. ಪೂರ್ಣಗೊಳಿಸಿದ ಸಾಂಸ್ಥಿಕ ಯೋಜನೆಗಳು

೧. ಹೊಸಪೇಟೆ ತಾಲ್ಲೂಕು ದರ್ಶನ: ಹೊಸಪೇಟೆ ತಾಲ್ಲೂಕು ದರ್ಶನ ಯೋಜನೆಯನ್ನು ಕನ್ನಡ ವಿಶ್ವವಿದ್ಯಾಲಯದ ಸಮಾಜ ವಿಜ್ಞಾನ ನಿಕಾಯವು ಕೈಗೊಂಡು ಎರಡು ವರ್ಷಗಳಲ್ಲಿ ಪೂರ್ಣಗೊಳಿಸಿತು. ಇದರಲ್ಲಿ ಹೊಸಪೇಟೆ ತಾಲ್ಲೂಕಿನ ಪ್ರಾಗಿತಿಹಾಸ, ಇತಿಹಾಸ, ಆಚರಣೆ, ನಂಬಿಕೆ, ಐತಿಹ್ಯ, ಮಠಗಳು, ಸ್ಥಳನಾಮ, ದೇವಾಲಯ, ಕೃಷಿ, ಕೈಗಾರಿಕೆ, ಶಿಕ್ಷಣ, ರಕ್ಷಣೆ ಮೊದಲಾದ ವಿಷಯಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಇದು ಜಂಟಿ ಯೋಜನೆ, ಸ್ಥಳೀಯ ಜನರಿಗೆ ಹಾಗೂ ಸರ್ಕಾರಕ್ಕೆ ತಾಲ್ಲೂಕಿನ ಮಾಹಿತಿ ಒದಗಿಸುವ ಆಶಯ ಹೊಂದಿದೆ.

೨. ಕರ್ನಾಟಕ ದೇವಾಲಯ ಕೋಶ (ಜಿಲ್ಲಾವಾರು ಯೋಜನೆ): ಈ ಯೋಜನೆಯಲ್ಲಿ ಪ್ರತಿಗ್ರಾಮಗಳಲ್ಲಿ ಕ್ಷೇತ್ರಕಾರ್ಯ ನಡೆಸಿ ಅಲ್ಲಿರುವ ಪ್ರಾಚೀನ ದೇವಾಲಯ ಮತ್ತು ಮೂರ್ತಿಶಿಲ್ಪಗಳನ್ನು ದಾಖಲಿಸಿ, ಅವುಗಳನ್ನು ಪರಿಚಯಿಸಲಾಗುವುದು. ಇಲ್ಲಿ ಮುಖ್ಯವಾಗಿ ಮಾಹಿತಿಗಳನ್ನು ಮಾತ್ರ ಒದಗಿಸಲಾಗಿದೆ. ಇದು ಭವಿಷ್ಯದಲ್ಲಿ ಕೈಗೊಳ್ಳುವ ಸಂಶೋಧನೆಗಳಿಗೆ ಹಾಗೂ ಪಿಎಚ್.ಡಿ ಹಾಗೂ ಎಂ.ಫಿಲ್, ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ. ಸೂಕ್ಷ್ಮ ಮತ್ತು ಆಳವಾದ ಅಧ್ಯಯನಕ್ಕೆ ಅನುವು ಮಾಡಿಕೊಡುವ ಈ ಯೋಜನೆ ಉಪಯುಕ್ತವಾಗಿದೆ. ಈ ಯೋಜನೆ ಅಡಿಯಲ್ಲಿ



PDF created with pdfFactory trial version www.pdffactory.com

ಕರ್ನಾಟಕದ ಎಲ್ಲ ದೇವಾಲಯಗಳು ಜಿಲ್ಲಾವಾರು ದಾಖಲಾಗುತ್ತವೆ. ಇದರಿಂದ ಕರ್ನಾಟಕದ ಸಾಂಸ್ಕೃತಿಕ ಮತ್ತು ಧಾರ್ಮಿಕ ಅಧ್ಯಯನಕ್ಕೆ ಅವಕಾಶವಾಗುವುದು. ಈಗಾಗಲೇ ಹಾವೇರಿ ಜಿಲ್ಲೆ, ಧಾರವಾಡ ಜಿಲ್ಲೆ ಮತ್ತು ಗುಲಬರ್ಗಾ ಜಿಲ್ಲೆಗಳ ಅಧ್ಯಯನ ಮುಗಿದಿದೆ.

೩. ಕರ್ನಾಟಕದಲ್ಲಿ ಕುಮಾರರಾಮನ ಪಂಥ: ಈ ಯೋಜನೆಯನ್ನು ಕನ್ನಡ ವಿಶ್ವವಿದ್ಯಾಲಯದ ಜಾನಪದ ವಿಭಾಗವು ಕೈಗೊಂಡು ಪೂರ್ಣಗೊಳಿಸಿದೆ. ಇದರಲ್ಲಿ ನನ್ನದು ಚರಿತ್ರೆ ಭಾಗದ ನಿರ್ವಹಣೆ. ಕರ್ನಾಟಕದ ಇತಿಹಾಸದಲ್ಲಿ ಕುಮ್ಮಟದುರ್ಗದ ಅರಸರು ಪ್ರಮುಖ ಸ್ಥಾನ ಪಡೆದಿದ್ದಾರೆ. ದೆಹಲಿ ಸುಲ್ತಾನರ ಸೈನ್ಯವನ್ನು ನಾಲ್ಕು ಬಾರಿ ಎದುರಿಸಿದ ಕೀರ್ತಿ ಇವರದು. ಇದು ಕಾಕತೀಯ, ಹೊಯ್ಸಳ ಮತ್ತು ಸೇವುಣ ರಾಜ್ಯಗಳ ನಡುವೆ ಇದ್ದು, ತಡೆ ರಾಜ್ಯವೆಂದು ಕರೆಸಿಕೊಂಡಿದೆ. ಚರಿತ್ರೆ ಭಾಗದಲ್ಲಿ ಈ ಮನೆತನದ ಮೂಲ, ವಂಶಾವಳಿ ಮತ್ತು ಅರಸರನ್ನು ಕುರಿತು ವಿವೇಚಿಸಲಾಗಿದೆ.

### ೧೩.೨. ಪೂರ್ಣಗೊಳಿಸಿದ ವೈಯಕ್ತಿಕ ಯೋಜನೆಗಳು

೧. ತಿಮ್ಮಲಾಪುರದ ಪುರಾತತ್ವ ಶೋಧ: ಹೊಸಪೇಟೆ ತಾಲ್ಲೂಕಿನ ಮರಿಯಮ್ಮನಹಳ್ಳಿ ಹೋಬಳಿಯಲ್ಲಿರುವ ತಿಮ್ಮಲಾಪುರ ಗ್ರಾಮ ರಾಷ್ಟ್ರೀಯ ಹೆದ್ದಾರಿ ೧೩ರಲ್ಲಿದೆ. ಹಂಪೆಯ ಕೊನೆಗಾಲದಲ್ಲಿ ನಿರ್ಮಾಣಗೊಂಡ ಅಗ್ರಹಾರವಿದು. ವಿಜಯನಗರದ ಅಧಿಕಾರಿ ಭಯಕಾರ ರಾಮಪ್ಪಯ್ಯನು ಇಲ್ಲಿನ ದೇವಾಲಯಗಳನ್ನು ನಿರ್ಮಿಸಿದ್ದಾನೆ. ವಿಜಯಗರದ ಕೊನೆಗಾಲದಲ್ಲಿ ನಿರ್ಮಾಣಗೊಂಡ ಈ ದೇವಾಲಯಗಳು ಅಧ್ಯಯನ ಯೋಗ್ಯವಾಗಿವೆ. ಈ ಪರಿಸರದಲ್ಲಿ ಅನೇಕ ಕೆರೆಕಟ್ಟೆಗಳು ಸಹ ನಿರ್ಮಾಣಗೊಂಡಿವೆ.

೨. ಬಳ್ಳಾರಿ ಜಿಲ್ಲೆಯ ಮರದ ವಾಸ್ತು ಮತ್ತು ಶಿಲ್ಪಕಲೆ: ಬಳ್ಳಾರಿ ಪ್ರದೇಶವು ಮರದ ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪಗಳ ಅಧ್ಯಯನಕ್ಕೆ ಸೂಕ್ತವಾಗಿದೆ. ಈ ಭಾಗದಲ್ಲಿ ಮರದ ಕೆತ್ತನೆಗಳು ವಿಪುಲವಾಗಿ ದೊರೆಯುತ್ತವೆ. ವಿಜಯನಗರ ಪತನಾನಂತರ ಈ ಭಾಗದ ಗ್ರಾಮೀಣ ಪ್ರದೇಶಗಳಲ್ಲಿ ವಿಜಯನಗರ ಕಾಲದ ವಾಸ್ತು ಮತ್ತು ಮೂರ್ತಿಶಿಲ್ಪ ಪರಂಪರೆ ಮುಂದುವರಿದಿರುವುದನ್ನು ಮನಗಾಣುತ್ತೇವೆ. ಅಂದರೆ ಜನಪದರು ತಮ್ಮ ಆರ್ಥಿಕ ಶಕ್ತಿಯ ಇತಿಮಿತಿಯೊಳಗೆ ತಮ್ಮಲ್ಲಿ ದೊರೆಯುವ ಸಂಪನ್ಮೂಲವನ್ನು ಬಳಸಿಕೊಂಡು ತಮ್ಮ ತಮ್ಮ ಗ್ರಾಮ ದೇವತೆಗಳ ದೇವಾಲಯಗಳನ್ನು ನಿರ್ಮಿಸಿಕೊಂಡಿದ್ದಾರೆ. ಈ ನಿರ್ಮಾಣಗಳಲ್ಲಿ ಪ್ರಮುಖವಾಗಿ ಸ್ಥಳೀಯವಾಗಿ ದೊರೆಯುವ ಮರಮುಟ್ಟುಗಳನ್ನು ಬಳಸಿಕೊಂಡಿದಾರೆ.

೩. ವಿಜಯನಗರದ ಗಾರೆಶಿಲ್ಪ: ವಿಜಯನಗರದ ಕಲೆ ಮತ್ತು ವಾಸ್ತುಶಿಲ್ಪ ಶೀರ್ಷಿಕೆಯಡಿ ಇದುವರೆಗೆ ನಡೆದಿರುವ ಅಧ್ಯಯನಗಳು ಹೆಚ್ಚಾಗಿ ಶಿಲಾಮಾಧ್ಯಮವನ್ನು ಕುರಿತಿವೆ. ಆದರೆ ಮರ, ಗಾರೆ ಮತ್ತಿತರ ಮಾಧ್ಯಮಗಳ ಕಲೆಯನ್ನು ಕುರಿತು ನಡೆದಿರುವ ಅಧ್ಯಯನಗಳು ವಿರಳ. ಆ ನಿಟ್ಟಿನಲ್ಲಿ ಕೈಗೊಂಡ ವೈಯಕ್ತಿಕ ಯೋಜನೆ ವಿಜಯನಗರದ ಗಾರೆಶಿಲ್ಪ. ವಿಜಯನಗರ ಕಾಲದ ದೇವಾಲಯಗಳ ಕೈಪಿಡಿ ಗೋಡೆ, ಗೋಪುರ ಮತ್ತು ಶಿಖರಗಳಲ್ಲಿ ವಿಪುಲವಾಗಿ ಗಾರೆಶಿಲ್ಪಗಳನ್ನು ರಚಿಸಿರುವುದನ್ನು ಕಾಣುತ್ತೇವೆ. ಈ ಶಿಲ್ಪಗಳು ದೇವಾಲಯಗಳ ಆಲಂಕರಣವನ್ನು ಹೆಚ್ಚಿಸಿವೆ. ಇವುಗಳಲ್ಲಿ ದೇವತೆಗಳು, ಭಕ್ತರು, ರಾಜಪರಿವಾರದವರು, ನೃತ್ಯಗಾರರು, ಪ್ರಾಣಿಗಳು ಮೊದಲಾದ ಗಾರೆಶಿಲ್ಪಗಳಿವೆ. ಇವುಗಳನ್ನು ಕುರಿತು ಪುರಾತತ್ತ್ವೀಯ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ.

### ೧೪. ಪ್ರಗತಿಯಲ್ಲಿರುವ ಯೋಜನೆಗಳು

೧. ಕರ್ನಾಟಕ ಪುರಾತತ್ವ ಸಂಪುಟ–ನಾಣ್ಯ: ಪ್ರಸ್ತುತ ಯೋಜನೆಯಡಿ ಕರ್ನಾಟಕದ ನಾಣ್ಯಗಳನ್ನು ಕುರಿತು ವಿವೇಚಿಸುವ ಮತ್ತು ನಾಣ್ಯಗಳ ಯಾದಿಯನ್ನು ತಯಾರಿಸುವ ಉದ್ದೇಶವಿದೆ. ಕರ್ನಾಟಕವು ಉಳಿದ ರಾಜ್ಯಗಳಿಗಿಂತ ಅಧಿಕ ಪ್ರಮಾಣದ ನಾಣ್ಯ ಸಂಪತ್ತನ್ನು ಹೊಂದಿದೆ. ಇವುಗಳ ಅಧ್ಯಯನ ವಿರಳವಾಗಿ ನಡೆದಿದೆ. ಪ್ರಸ್ತುತ ಸಾಮಾನ್ಯ ಓದುಗರು ಮತ್ತು ಸಂಶೋಧಕರನ್ನು ಗಮನದಲ್ಲಿರಿಸಿಕೊಂಡು ಪ್ರಾಚೀನ ಕಾಲದಿಂದ ಬ್ರಿಟಿಷರ ಕಾಲದವರೆಗಿನ ನಾಣ್ಯಗಳನ್ನು ಕುರಿತು ಪುರಾತತ್ವೀಯ, ಸಾಂಸ್ಕೃತಿಕ ಮತ್ತು ಆರ್ಥಿಕ ಇತಿಹಾಸದ ನೆಲೆಗಳಲ್ಲಿ ಅಧ್ಯಯನ ಮಾಡುವ ಉದ್ದೇಶವಿದೆ.

೨. ಕರ್ನಾಟಕದಲ್ಲಿ ಬಾಹುಬಲಿ ಶಿಲ್ಪಗಳು: ಕರ್ನಾಟಕದಲ್ಲಿ ನೆಲೆಗೊಂಡಿರುವ ಜೈನಧರ್ಮ ತನ್ನದೇ ಆದ ವಿಶಿಷ್ಟ ಗುಣಗಳನ್ನು ಮೈಗೂಡಿಸಿಕೊಂಡಿದೆ. ಪ್ರಾಚೀನ ಕಾಲದಿಂದಲೂ ಜೈನಧರ್ಮದ ಕೇಂದ್ರವಾಗಿರುವ ಕರ್ನಾಟಕದಲ್ಲಿ ಬಾಹುಬಲಿ ಶಿಲ್ಪಗಳು ವಿಶಿಷ್ಟವಾಗಿದ್ದು, ಇಂದಿಗೂ ರಚನೆಗೊಂಡು ಪ್ರತಿಷ್ಠಾಪನೆಗೊಳ್ಳುತ್ತಿರುವುದು ವಿಶೇಷ. ಆರಂಭದಲ್ಲಿ ಬಾದಾಮಿ, ಎಲ್ಲೋರದಲ್ಲಿ ನಿರ್ಮಾಣಗೊಂಡ ಬಾಹುಬಲಿ ಶಿಲ್ಪಗಳು ನಂತರ ಕಂಬದಹಳ್ಳಿ, ಶ್ರವಣಬೆಳಗೊಳ, ಗೊಮ್ಮಟಗಿರಿ, ಕಾರ್ಕಳ, ಧರ್ಮಸ್ಥಳದಲ್ಲಿ ಕಂಡುಬರುತ್ತವೆ. ಈ ಬೃಹದಾಕಾರದ ಮೂರ್ತಿಶಿಲ್ಪಗಳ ರಚನೆಯ ಹಿಂದಿರುವ ಆಶಯಗಳನ್ನು ಗುರುತಿಸುವುದೇ ಪ್ರಸ್ತುತ ಯೋಜನೆಯ ಮುಖ್ಯ ಉದ್ದೇಶ. ಜೊತೆಗೆ ಅವುಗಳ ಪುರಾತತ್ವೀಯ ಮತ್ತು ಸಾಂಸ್ಕೃತಿಕ ಅಧ್ಯಯನವನ್ನು ಕೈಗೊಳ್ಳಲಾಗುವುದು.

### ೧೫. ಪ್ರಕಟಣೆಗಳು

#### ೧೫.೧. ವಿಶ್ವವಿದ್ಯಾಲಯದಿಂದ ಪ್ರಕಟಿತ ಕೃತಿಗಳು



PDF created with pdfFactory trial version www.pdffactory.com

೧. ಹೊಸಪೇಟೆ ತಾಲ್ಲೂಕು ದರ್ಶನ: ಈ ಕೃತಿಯು ಕನ್ನಡ ವಿಶ್ವವಿದ್ಯಾಲಯದ ಪ್ರಸಾರಾಂಗದ ವತಿಯಿಂದ ೨೦೦೨ರಲ್ಲಿ ಪ್ರಕಟಗೊಂಡಿದೆ. ಹೊಸಪೇಟೆ ತಾಲ್ಲೂಕಿನ ಪ್ರಾಚೀನ ಇತಿಹಾಸ, ಮಧ್ಯಕಾಲೀನ ಇತಿಹಾಸ, ಆಧುನಿಕ ಇತಿಹಾಸ, ದೇವಾಲಯಗಳು, ಆಚರಣೆ ಮತ್ತು ನಂಬಿಕೆಗಳು, ಮಠಗಳು, ಐತಿಹ್ಯ, ಸ್ಥಳಪುರಾಣ, ಸ್ಥಳನಾಮ, ಕೃಷಿ, ನೀರಾವರಿ, ಕೆರೆಕಟ್ಟೆಗಳು, ಶಿಕ್ಷಣ, ಆರೋಗ್ಯ, ಕೈಗಾರಿಕೆ, ರಕ್ಷಣೆ, ನ್ಯಾಯ ಮೊದಲಾದ ಹತ್ತು ಹಲವು ಕ್ಷೇತ್ರಗಳನ್ನು ಪರಿಚಯಿಸುವ ಈ ಕೃತಿ ಸ್ಥಳೀಯ ಮಾಹಿತಿಗಳನ್ನು ಒಳಗೊಂಡಿದ್ದು, ಜನಸಾಮಾನ್ಯರು, ಸರ್ಕಾರದ ಆಡಳಿತಾಧಿಕಾರಿಗಳಿಗೆ ಮತ್ತು ಸಂಶೋಧನ ವಿದ್ಯಾರ್ಥಿಗಳಿಗೆ ಉಪಯುಕ್ತವಾಗಿದೆ.

೨. ಬಳ್ಳಾರಿ ಜಿಲ್ಲೆಯ ಮರದ ವಾಸ್ತು (೨೦೦೦): ಬಳ್ಳಾರಿ ಜಿಲ್ಲೆಯಲ್ಲಿ ವಿಜಯನಗರೋತ್ತರ ಕಾಲದಲ್ಲಿ ನಿರ್ಮಾಣ ಗೊಂಡಿರುವ ಬಹುತೇಕ ದೇವಾಲಯಗಳು ಮರದ ರಚನೆಗಳಾಗಿವೆ. ಸ್ಥಳೀಯವಾಗಿ ದೊರೆಯುವ ಬೇವಿನಮರವನ್ನು ಬಳಸಿ ಈ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಸಾಮ್ರಾಜ್ಯದ ಅವನತಿ ನಂತರವೂ ದೇವಾಲಯಗಳ ನಿರ್ಮಾಣ ಪರಂಪರೆ ಗ್ರಾಮೀಣ ಭಾಗದಲ್ಲಿ ಮುಂದುವರಿದಿರುವುದನ್ನು ಇಲ್ಲಿ ಗುರುತಿಸಲಾಗಿದೆ. ಸ್ಥಳೀಯರು ತಮ್ಮ ಮಿತವಾದ ಆರ್ಥಿಕಶಕ್ತಿಯಲ್ಲೆ ಸುಂದರವಾದ ದೇವಾಲಯಗಳನ್ನು ಮರದಲ್ಲಿ ನಿರ್ಮಿಸಿರುವುದು ಗಮನಾರ್ಹ. ಈ ಭಾಗದಲ್ಲಿ ವಿಪುಲವಾಗಿ ಬೆಳೆಯುವ ಬೇವಿನ ಮರ ಜನರ ಆರ್ಥಿಕ ಶಕ್ತಿಯನ್ನು ಉತ್ತೇಜಿಸಿದೆ. ಮಲೆನಾಡಿನ ತೇಗ, ಬೀಟೆ, ಮತ್ತಿತರ ಬೆಲೆಬಾಳುವ ಮರಗಳಂತೆ ಬಯಲು ಸೀಮೆಯಲ್ಲಿ ಬೇವಿನಮರ ವಿಶೇಷ ಸ್ಥಾನವನ್ನು ಪಡೆದುಕೊಂಡಿದೆ.

೩. ವಿಜಯನಗರ ಗಾರೆಶಿಲ್ಪ (೨೦೦೦) ವಿಜಯನಗರ ಕಾಲದಲ್ಲಿ ದೇವಾಲಯಗಳ ವಿವಿಧ ಭಾಗಗಳ ಅಲಂಕರಣೆಯಲ್ಲಿ ಗಾರೆಯ ಪಾತ್ರ ಮಹತ್ವದ್ದು. ಗಾರೆಯನ್ನು ಕೇವಲ ಕಟ್ಟಡಗಳ ನಿರ್ಮಾಣಕ್ಕೆ ಬಳಸದೆ ಆ ಕಟ್ಟಡಗಳ ಸೌಂದರ್ಯ ವೃದ್ಧಿಸಲು ಗಾರೆಯ ಪ್ರತಿಮೆಗಳನ್ನು ರಚಿಸಲಾಯಿತು. ಲೌಕಿಕ ಮತ್ತು ಅಲೌಕಿಕ ಪ್ರತಿಮೆಗಳನ್ನು ನಿರ್ಮಿಸುವ ಮೂಲಕ ಗಾರೆ ಮಾಧ್ಯಮವು ಹೆಚ್ಚು ಜನಪ್ರಿಯಗೊಂಡಿತು. ಶಿಲೆ, ಲೋಹ, ಮರಗಳಂತೆ ಗಾರೆಯು ಸಹ ಕಲೆ ಮತ್ತು ವಾಸ್ತುಶಿಲ್ಪ ರಚನೆಯಲ್ಲಿ ಮಹತ್ವದ ಸ್ಥಾನ ಪಡೆಯಿತು. ವಿಜಯನಗರ ಕಟ್ಟಡಾವಶೇಷಗಳಲ್ಲಿ ಗಾರೆ ಬಳಕೆ ವ್ಯಾಪಕವಾಗಿದ್ದು, ನುರಿತ ಗಾರೆ ಕುಶಲಕರ್ಮಿಗಳ ಸಮುದಾಯ ಹೆಚ್ಚಿನ ಸಂಖ್ಯೆಯಲ್ಲಿತ್ತು. ವಿಜಯನಗರ ಕಾಲದ ದೇವಾನಯಗಳ ಕೈಪಿಡಿಗೋಡೆ ಮತ್ತು ಶಿಖರಗಳಲ್ಲಿ ಕಂಡುಬರುವ ಗಾರೆ ಪ್ರತಿಮೆಗಳು ಆ ಕಾಲದ ಧಾರ್ಮಿಕ ಮತ್ತು ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಡುವಲ್ಲಿ ಪ್ರಮುಖ ಆಕರಗಳಾಗಿ ನಿಲ್ಲುತ್ತವೆ. ಈ ಕುರಿತು ಇನ್ನು ವ್ಯಾಪಕವಾದ ಅಧ್ಯಯನಗಳು ನಡೆಯಬೇಕಿದೆ.

೪. ಕರ್ನಾಟಕ ದೇವಾನಯಕೋಶ ಹಾವೇರಿ ಜಿಲ್ಲೆ – (೧೯೯೯): ಹಾವೇರಿ ಜಿಲ್ಲೆಯ ದೇವಾಲಯಗಳನ್ನು ದಾಖಲಿಸಿ ಮುಂದಿನ ಅಧ್ಯಯನ ಮತ್ತು ಸಂಶೋಧನೆಗಳಿಗೆ ಅಗತ್ಯವಾದ ಮಾಹಿತಿಯನ್ನು ಒದಗಿಸಲಾಗಿದೆ. ಈಗಾಗಲೇ ವಿಶ್ವವಿದ್ಯಾಲಯವು ಬೇರೆ, ಬೇರೆ ಜಿಲ್ಲೆಗಳ ದೇವಾಲಯ ಕೋಶಗಳನ್ನು ಕೃತಿ ರೂಪದಲ್ಲಿ ಪ್ರಕಟಿಸಿದೆ. ದೇವಾಲಯಗಳ ದಾಖಲಾತಿಯ ಜೊತೆಗೆ ಗ್ರಾಮದ ಪರಿಸರದಲ್ಲಿ ದೊರೆಯುವ ಬಿಡಿಶಿಲ್ಪಾವಶೇಷಗಳು, ವೀರಗಲ್ಲುಗಳು, ಅಪ್ರಕಟಿತ ಶಾಸನಗಳು ಮತ್ತು ಪುರಾತತ್ವೀಯ ನೆಲೆಗಳನ್ನು ಸಹ ಸಾಂದರ್ಭಿಕವಾಗಿ ದಾಖಲಿಸಲಾಗಿದೆ. ಕರ್ನಾಟಕದ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಳ್ಳಲು ದೇವಾಲಯ ಕೋಶಗಳು ವಿಪುಲವಾದ ಮಾಹಿತಿಗಳನ್ನು ಒದಗಿಸುತ್ತವೆ.

೫. ಕರ್ನಾಟಕ ದೇವಾಲಯಕೋಶ – ಧಾರವಾಡ ಜಿಲ್ಲೆ, (೨೦೦೫): ಧಾರವಾಡ ಜಿಲ್ಲೆಯ ದೇವಾಲಯಗಳು ಮತ್ತು ಬಿಡಿಶಿಲ್ಪಗಳನ್ನು ದಾಖಲಿಸಲಾಗಿದೆ. ಜೊತೆಗೆ ಗ್ರಾಮಗಳಲ್ಲಿರುವ ಅಪ್ರಕಟಿತ ಶಾಸನಗಳು, ವೀರಗಲ್ಲುಗಳು ಮತ್ತು ರಕ್ಷಣಾ ವಾಸ್ತು ಅವಶೇಷಗಳನ್ನು ಸಹ ಸಾಂದರ್ಭಿಕವಾಗಿ ದಾಖಲಿಸಲಾಗಿದೆ. ಮಲೆನಾಡು, ಅರೆ ಮಲೆನಾಡು ಮತ್ತು ಬಯಲು ಸೀಮೆಗಳನ್ನು ಒಳಗೊಂಡಿರುವ ಧಾರವಾಡ ಜಿಲ್ಲೆಯ ಧಾರ್ಮಿಕ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ಪ್ರಾದೇಶಿಕವಾಗಿ ಕಟ್ಟಿಕೊಳ್ಳಲು ಪ್ರಸ್ತುತ ದೇವಾಲಯ ಕೋಶಗಳು ಉಪಯುಕ್ತವಾಗುತ್ತವೆ. ಜತೆಗೆ ಎಂ.ಫಿಲ್ ಮತ್ತು ಪಿಎಚ್.ಡಿ ಅಧ್ಯಯನಗಳಿಗೆ ಅಗತ್ಯವಾದ ಮಾಹಿತಿಗಳನ್ನು ಒದಗಿಸುವ ದೇವಾಲಯಕೋಶಗಳು ಸೂಕ್ಷ್ಮ ಮತ್ತು ವಿಸ್ತೃತ ಅಧ್ಯಯನಗಳಿಗೆ ಅನುವು ಮಾಡಿಕೊಡುತ್ತವೆ. ಸಂಪೂರ್ಣ ಕ್ಷೇತ್ರಕಾರ್ಯಾಧಾರಿತವಾದ ದೇವಾಲಯ ಕೋಶಗಳು ಅಮೂಲ್ಯವಾದ ಮಾಹಿತಿಗಳನ್ನು ಒದಗಿಸುತ್ತವೆ.

೬. ಜಿ.ಎಸ್.ಶಿವರುದ್ರಪ್ಪ (೧೯೯೫): ಕವಿ, ವಿಮರ್ಶಕ ಮತ್ತು ಲೇಖಕರಾದ ಡಾ.ಜಿ.ಎಸ್.ಶಿವರುದ್ರಪ್ಪನವರನ್ನು ಕುರಿತ ಪುಟ್ಟ ಕೃತಿ. ಮುಖ್ಯವಾಗಿ ಅದರ ಬದುಕು ಮತ್ತು ಬರಹಗಳನ್ನು ಪರಿಚಯಿಸುವ ಈ ಪುಸ್ತಕವನ್ನು ಕನ್ನಡ ವಿಶ್ವವಿದ್ಯಾಲಯ ಪ್ರಸಾರಾಂಗವು ಮಂಟಪಮಾಲೆಯಲ್ಲಿ ಪ್ರಕಟಿಸಿದೆ.

೭. ಕುಮ್ಮಟದುರ್ಗದ ಅರಸರು (೨೦೧೦): ಈಗಿನ ಕೊಪ್ಪಳ ಜಿಲ್ಲೆಯಲ್ಲಿರುವ ಕುಮ್ಮಟದುರ್ಗ ಕ್ರಿ.ಶ.ಹದಿಮೂರು ಮತ್ತು ಹದಿನಾಲ್ಕನೆಯ ಶತಮಾನದಲ್ಲಿನ ಕರ್ನಾಟಕದ ರಾಜಕಾರಣದಲ್ಲಿ ಮಹತ್ವದ ಪಾತ್ರ ನಿರ್ವಹಿಸಿದೆ. ಸೇವುಣ, ಹೊಯ್ಸಳ ಮತ್ತು ಕಾಕತೀಯರ ನಡುವೆ ಇದ್ದ ಕುಮ್ಮಟದುರ್ಗ ರಾಜ್ಯವನ್ನು ಚರಿತ್ರೆಕಾರರು ತಡೆ ರಾಜ್ಯವೆಂದು ಕರೆದಿದ್ದಾರೆ. ಇದನ್ನು ಆಳಿದ ಮುಮ್ಮಡಿ ಸಿಂಗೆಯನಾಯಕ, ಕಂಪಿಲದೇವ ಮತ್ತು ರಾಮನಾಥ ಇವರನ್ನು ಕುಮ್ಮಟದುರ್ಗದ ಅರಸರೆಂದು ಕರೆಯಲಾಗಿದೆ. ರಾಮನಾಥ ಕುಮಾರರಾಮನೆಂದು ಪ್ರಸಿದ್ಧನಾಗಿ ಜನರಿಂದ ಪೂಜೆಗೊಳ್ಳುತ್ತಿದ್ದಾನೆ. ಈ ಮನೆತನದ ಮೂಲ, ವಂಶಾವಳಿ ಮತ್ತು ಅರಸರ ಸಾಧನೆಗಳನ್ನು ಪ್ರಸ್ತುತ ಕುಮ್ಮಟ ದುರ್ಗದ ಅರಸರು ಕೃತಿಯಲ್ಲಿ ಸಂಕ್ಷಿಪ್ತವಾಗಿ ಹೇಳುವ ಪ್ರಯತ್ನ ಮಾಡಲಾಗಿದೆ. ಕರ್ನಾಟಕದ ಚರಿತ್ರೆಯಲ್ಲಿ ಇವರ ಸ್ಥಾನ ಮಹತ್ವದ್ದು.



PDF created with pdfFactory trial version www.pdffactory.com

### ೧೫.೨. ವೈಯಕ್ತಿಕ ಪ್ರಕಟಿತ ಕೃತಿಗಳು

೧. History and Monuments of Chamundi Hill: ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಯಲಯವು ೧೯೯೯ರಲ್ಲಿ ಈ ಕೃತಿಯನ್ನು ಪ್ರಕಟಿಸಿತು. ಚಾಮುಂಡಿ ಬೆಟ್ಟದ ಇತಿಹಾಸ ಮತ್ತು ಪುರಾತತ್ವದ ಅಧ್ಯಯನವನ್ನು ಒಳಗೊಂಡಿರುವ ಈ ಕೃತಿಯು ಅಲ್ಲಿನ ದೇವಾಲಯಗಳು, ಶಿಲ್ಪಗಳು, ಮಠ ಮತ್ತು ಆಶ್ರಮಗಳು, ಅರಮನೆ, ಮತ್ತಿತರ ಪ್ರಾಚ್ಯಾವಶೇಷಗಳನ್ನು ಪರಿಚಯಿಸುತ್ತದೆ.

೨. ಕರ್ನಾಟಕದ ಪುರಾತತ್ವ ಶೋಧ: ೨೦೧೧ರಲ್ಲಿ ಶ್ರೀರಂಗಪಟ್ಟಣದ ಶ್ರೀಲಕ್ಷ್ಮಿ ಪ್ರಕಾಶನದವರು ಪ್ರಕಟಿಸಿದ ಈ ಕೃತಿಯಲ್ಲಿ ಆಯ್ದ ಸಂಶೋಧನ ಲೇಖನಗಳಿವೆ. ಈ ಸಂಶೋಧನ ಲೇಖನಗಳು ಕರ್ನಾಟಕದ ಪ್ರಾಗಿತಿಹಾಸ, ಇತಿಹಾಸ, ದೇವಾಲಯಗಳು, ಶಾಸನಗಳು ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ಕುರಿತಿವೆ. ವಿವಿಧ ವಿಚಾರ ಸಂಕಿರಣಗಳಲ್ಲಿ ಮಂಡಿಸಲಾದ ಈ ಲೇಖನಗಳು ಆಯಾಯ ವಾರ್ಷಿಕ ಸಂಚಿಕೆಗಳಲ್ಲಿ ಪ್ರಕಟಗೊಂಡಿದ್ದವು. ಅವುಗಳನ್ನು ಒಂದೆಡೆ ತರುವ ಉದ್ದೇಶದಿಂದ ಪ್ರಸ್ತುತ ಕೃತಿಯಲ್ಲಿ ಅಳವಡಿಸಲಾಗಿದೆ.

### ೧೫.೩. ಸಂಪಾದಿತ ಕೃತಿಗಳು

೧. ಹಂಪಿ : ಅಂದು ಮತ್ತು ಇಂದು (೨೦೦೫): ಕನ್ನಡ ವಿಶ್ವವಿದ್ಯಾಲಯ ಹಂಪಿ ಮತ್ತು ಕನ್ನಡ ಸಂಸ್ಕೃತಿ ಇಲಾಖೆಯ ಸಹಭಾಗಿತ್ವದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಹಂಪಿಗೆ ಸಂಬಂಧಿಸಿದ ಸಂಶೋಧನ ಲೇಖನಗಳನ್ನು ಮಂಡಿಸಲಾಗಿತ್ತು. ಅವುಗಳು ಹಂಪಿಯ ಪ್ರಾಚೀನ ಇತಿಹಾಸ, ಶಾಸನ, ಪ್ರವಾಸೋದ್ಯಮ, ವಿಶ್ವಪರಂಪರೆ ಮತ್ತು ಹಂಪಿ ಎದುರಿಸುತ್ತಿರುವ ಸಮಸ್ಯೆ ಮತ್ತು ಸವಾಲುಗಳನ್ನು ಒಳಗೊಂಡ ಲೇಖನಗಳಾಗಿವೆ.

೨. ತೊಣ್ಣೂರು (೨೦೦೯): ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ವತಿಯಿಂದ ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ ಯೋಜನೆಯಡಿಯಲ್ಲಿ ತೊಣ್ಣೂರು ಗ್ರಾಮವನ್ನು ಕುರಿತು ವಿಚಾರ ಸಂಕಿರಣವನ್ನು ಏರ್ಪಡಿಸಲಾಗಿತ್ತು. ವಿದ್ವಾಂಸರು, ಈ ವಿಚಾರ ಸಂಕಿರಣದಲ್ಲಿ ತೊಣ್ಣೂರಿನ ಇತಿಹಾಸ, ದೇವಾಲಯ, ಮೂರ್ತಿಶಿಲ್ಪ, ಶಾಸನ, ಐತಿಹ್ಯ, ಕೆರೆಕಟ್ಟೆಗಳು, ಗ್ರಾಮದೇವತೆಗಳು, ಮತಪಂಥ, ಆಚರಣೆ ಮತ್ತು ನಂಬಿಕೆ ಮೊದಲಾದ ವಿಷಯಗಳನ್ನು ಕುರಿತು ಸಂಶೋಧನ ಲೇಖನಗಳನ್ನು ಮಂಡಿಸಿದ್ದರು. ಈ ಎಲ್ಲ ಲೇಖನಗಳನ್ನು ತೊಣ್ಣೂರು ಕೃತಿಯಲ್ಲಿ ಪ್ರಕಟಿಸಲಾಗಿದೆ. ತೊಣ್ಣೂರು ಐತಿಹಾಸಿಕವಾಗಿ ಮತ್ತು ಸಾಂಸ್ಕೃತಿಕವಾಗಿ ಮಹತ್ವದ ಗ್ರಾಮ. ಇದೇ ಯೋಜನೆಯಡಿ ಮೈಲಾರ, ನಾಗಮಂಗಲ ಕುರಿತ ಕೃತಿಗಳನ್ನು ಸಂಪಾದಿಸಲಾಗುತ್ತಿದ್ದು, ಅಚ್ಚಿನಲ್ಲಿವೆ.

೩. ನೇಕಾರ ಸಮಾಜ, ಸಂಸ್ಕೃತಿ ಮತ್ತು ಆರ್ಥಿಕ ಸ್ಥಿತಿಗತಿ (೨೦೦೯): ಈ ಮೇಲ್ಕಂಡ ಕೃತಿಯನ್ನು ದೇವರ ದಾಸಿಮಯ್ಯ ಅಧ್ಯಯನ ಪೀಠದ ವತಿಯಿಂದ ಸಂಪಾದಿಸಲಾಗಿದೆ. ಗುಲಬರ್ಗಾ ಜಿಲ್ಲೆಯ ಮುದನೂರಿನಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಮಂಡಿಸಲಾದ ಲೇಖನಗಳ ಸಂಗ್ರಹವಿದು. ನೇಕಾರರ ಒಳಪಂಗಡಗಳು, ಸಾಂಸ್ಕೃತಿಕ ಹಿನ್ನೆಲೆ, ಕುಟುಂಬದ ಪಾತ್ರ, ನೇಕಾರ ವೃತ್ತಿಯಲ್ಲಿ ಯಜಮಾನ ಮತ್ತು ನೇಕಾರರು, ನೇಕಾರಿಕೆಯಲ್ಲಿ ಪ್ರಾದೇಶಿಕ ವೈವಿಧ್ಯತೆ, ಉತ್ಪಾದನೆ ಮತ್ತು ಮಾರಾಟ ಸಮಸ್ಯೆ, ಆರ್ಥಿಕ ಸ್ಥಿತಿಗತಿ ಹಾಗೂ ಸರ್ಕಾರದ ಸವಲತ್ತುಗಳು ಲೇಖನಗಳನ್ನು ಒಳಗೊಂಡಿರುವ ಈ ಕೃತಿಯು ನೇಕಾರರ ಬದುಕಿನ ಹಲವು ಮುಖಗಳನ್ನು ಪರಿಚಯಿಸುತ್ತದೆ.

### ೧೬. ಪ್ರಕಟಿತ ಪ್ರಮುಖ ೧೦ ಲೇಖನಗಳು

೧. ಕನ್ನಡ ಶಾಸನಗಳಲ್ಲಿ ಬಾಲವಣ ಕನ್ನಡ ಸಾಹಿತ್ಯ ಪರಿಷತ್ ಪತ್ರಿಕೆ (ಸಂಪುಟ ೭೧-೭೨, ಸಂಚಿಕೆ ೨-೧, ೧೯೮೬-೮೭)ಯಲ್ಲಿ ಪ್ರಕಟವಾಗಿರುವ : ಕನ್ನಡ ಶಾಸನಗಳಲ್ಲಿ ಬಾಲವಣ ಲೇಖನವು ದನಗಳ ಮೇಲೆ ವಿದಿಸುತ್ತಿದ್ದ ತೆರಿಗೆಯನ್ನು ಕುರಿತದ್ದು. ಕ್ರಿ.ಶ.೮ನೆಯ ಶತಮಾನದಿಂದ ಈವತ್ತಿನವರೆಗೂ ಅಸ್ತಿತ್ವದಲ್ಲಿದೆ. ಮಾರಾಟವಾದ ದನಗಳ ಒಂದು ಬಾಲಕ್ಕೆ ಇಂತಿಷ್ಟು ಹಣ ಎಂದು ವಸೂಲು ಮಾಡಿ ಆ ಹಣವನ್ನು ಊರಿನ ಧಾರ್ಮಿಕ ಕೆಲಸಗಳಿಗೆ ವಿನಿಯೋಗಿಸಲಾಗುತ್ತಿತ್ತು. ಮಂಡ್ಯ ಜಿಲ್ಲೆಯ ಪಾಂಡವಪುರ ತಾಲ್ಲೂಕಿನ ಚಿನಕುರುಳಿ ಗ್ರಾಮದಲ್ಲಿ ಬಾಲದಣದ ವಸೂಲಿ ಇಂದಿಗೂ ಚಾಲ್ತಿಯಲ್ಲಿದೆ.

೨. Mahabaleshwara Temple at Chamundi Hill, Mysore: ಮಿಥಿಕ್ ಸೊಸೈಟಿಯ ಪತ್ರಿಕೆಯಲ್ಲಿ (ಸಂಚಿಕೆ ೧-೨, ೧೯೮೮) ಪ್ರಕಟವಾಗಿರುವ ಈ ಲೇಖನವು ಮಹಾಬಲೇಶ್ವರ ದೇವಾಲಯದ ಪ್ರಾಚೀನತೆ ಮತ್ತು ವಾಸ್ತುಶಿಲ್ಪವನ್ನು ಕುರಿತಿದೆ. ಗಂಗರ ಕಾಲದ ನಿರ್ಮಾಣವಾಗಿರುವ ಈ ದೇವಾಲಯವು ಚಾಮುಂಡಿಬೆಟ್ಟದ ಪ್ರಾಚೀನ ದೇವಾಲಯವಾಗಿದೆ. ಚಾಮುಂಡಿ ಬೆಟ್ಟವನ್ನು ಮೊದಲಿಗೆ ಮಹಾಬಲ ತೀರ್ಥ ಅಥವಾ ಮಹಾಬಲಾದ್ರಿ ಎಂದು ಕರೆಯುತ್ತಿದ್ದರು. ಮಧ್ಯಕಾಲದಲ್ಲಿ ಅಸ್ತಿತ್ವಕ್ಕೆ ಬಂದ ಚಾಮುಂಡೇಶ್ವರಿ ದೇವಾಲಯದಿಂದಾಗಿ ಮಹಾಬಲೇಶ್ವರ ದೇವಾಲಯ ಹಿನ್ನಡೆ ಅನುಭವಿಸಿತು.

೩. ಲಕ್ಷ್ಮೇಶ್ವರದ ರಾಮಲಿಂಗ ದೇವಾಲಯ : ಒಂದು ಅಧ್ಯಯನ: ಕರ್ನಾಟಕ ಇತಿಹಾಸ ಅಕಾಡೆಮಿಯ ಇತಿಹಾಸ ದರ್ಶನ ಸಂಚಿಕೆಯಲ್ಲಿ (ಸಂಪುಟ ೬, ೧೯೮೯), ಪ್ರಕಟವಾಗಿರುವ ಈ ಲೇಖನವು ಲಕ್ಷ್ಮೇಶ್ವರದ ರಾಮಲಿಂಗ ದೇವಾಲಯದ ನೆಲೆಯನ್ನು ಗುರುತಿಸುವುದಾಗಿದೆ. ಇತ್ತೀಚೆಗೆ ನಿರ್ಮಿಸಿದ ಕೊಠಡಿಯಲ್ಲಿ ರಾಮಲಿಂಗವಿದೆ. ಅಂದರೆ



PDF created with pdfFactory trial version www.pdffactory.com

ಪ್ರಾಚೀನ ದೇವಾಲಯದ ತಳಪಾಯ ಸ್ಪಷ್ಟವಾಗಿ ಕಂಡುಬರುತ್ತದೆ. ಇಲ್ಲಿದ್ದ ಅಗ್ನಿಹೋತ್ರಿಗಳು ಮಾಧ್ವ ಸಂಪ್ರದಾಯಕ್ಕೆ ಪರಿವರ್ತನೆಗೊಂಡಿದ್ದಾರೆ. ರಾಮಲಿಂಗ ದೇವಾಲಯ ಮತ್ತು ಮಠ ಶಿಕ್ಷಣದ ಕೇಂದ್ರಗಳಾಗಿದ್ದವು. ಇಲ್ಲಿ ವಿಶೇಷವಾಗಿ ಸಾಮವೇದವನ್ನು ಬೋಧಿಸಲಾಗುತ್ತಿತ್ತು.

೪. ಕೃಷ್ಣದೇವರಾಯನ ಅಪ್ರಕಟಿತ ಕಂದಗಲ್ಲು ತಾಮ್ರಶಾಸನ (೧೯೯೧): ಇದು ಸಂಸ್ಕೃತ ಶಾಸನವಾಗಿದ್ದು, ಬ್ರಾಹ್ಮಣ ವಿದ್ವಾಂಸನೊಬ್ಬನಿಗೆ ನೀಡಿದ ಭೂದಾನವನ್ನು ಕುರಿತಿದೆ. ಈಗಿನ ಅನಂತಪುರ ಜಿಲ್ಲೆಯ ಗುತ್ತಿ ಸಮೀಪ ಭೂಮಿಯನ್ನು ದಾನವಾಗಿ ನೀಡಲಾಗಿತ್ತು. ಶಾಸನದಲ್ಲಿ ಕನ್ನಡವನ್ನು ದೇಶಭಾಷೆ ಎಂದು ಕರೆದು, ಭೂಮಿಯ ಗಡಿಗಳನ್ನು ಕನ್ನಡದಲ್ಲಿ ಹೇಳಲಾಗಿದೆ.

೫. Chamundeshwari Temple-A Study (೧೯೯೬): ಕರ್ನಾಟಕ ರಾಜ್ಯದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ Art and Architecture in Karnataka, Vol-II ಎಂಬ ಕೃತಿಯಲ್ಲಿ ಪ್ರಕಟವಾಗಿರುವ ಸಂಶೋಧನ ಲೇಖನವು, ಮೈಸೂರಿನ ಚಾಮುಂಡಿ ಬೆಟ್ಟದ ಮೇಲಿರುವ ಚಾಮುಂಡೇಶ್ವರಿ ದೇವಾಲಯವನ್ನು ಕುರಿತಿದೆ. ದೇವಾಲಯದ ಕಲೆ ಮತ್ತು ವಾಸ್ತುಶಿಲ್ಪ, ಮೈಸೂರು ಒಡೆಯರು ನೀಡಿದ ಕೊಡುಗೆಗಳ ವಿವರ, ಆಡಳಿತ, ಸಿಬ್ಬಂದಿ, ವಿಶೇಷ ಉತ್ಸವ, ಜಾತ್ರೆಗಳ ವಿವರಗಳನ್ನು ಒಳಗೊಂಡಿದೆ.

೬. History and Monments of Thimmalapura (2000): ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯದ Recent Researches in Karnataka Archacology ಎಂಬ ಕೃತಿಯಲ್ಲಿ ಪ್ರಕಟವಾಗಿರುವ ಹೊಸಪೇಟೆ ತಾಲ್ಲೂಕಿನ ಲೇಖನವಿದು. ತಿಮ್ಮಲಾಪುರದಲ್ಲಿ ವಿಜಯನಗರ ಕೊನೆಗಾಲದ ದೇವಾಲಯಗಳು ನಿರ್ಮಾಣಗೊಂಡಿವೆ. ವಿಜಯನಗರ ವಾಸ್ತು ಅಧ್ಯಯನಕ್ಕೆ ಯೋಗ್ಯವಾಗಿರುವ ಈ ದೇವಾಲಯಗಳು ಇಂದಿಗೂ ಸುಸ್ಥಿತಿಯಲ್ಲಿವೆ. ಮೂಲತಃ ತಿಮ್ಮಲಾಪುರ ಅಗ್ರಹಾರವಾಗಿದ್ದು, ವಿಜಯನಗರದ ಅಧಿಕಾರಿ ಭಯಕಾರ ರಾಮಪ್ಪಯ್ಯನು ನಿರ್ಮಿಸಿದ್ದಾನೆ.

೭. Role of Money in Educational Institution in Ancient Karnataka (2001): ಸಿ.ಟಿ.ಎಂ. ಕೊಟ್ರಯ್ಯನವರ ಅಭಿನಂದನ ಗ್ರಂಥದಲ್ಲಿ ಪ್ರಕಟವಾಗಿರುವ ಲೇಖನವು ಪ್ರಾಚೀನ ಕರ್ನಾಟಕದ ಶಿಕ್ಷಣ ಸಂಸ್ಥೆಗಳಿಗೆ ನೀಡಿದ ಹಣದ ರೂಪದ ದಾನದತ್ತಿಗಳನ್ನು ಕುರಿತದ್ದಾಗಿದೆ. ವಿದ್ಯಾರ್ಥಿಗಳ ಮತ್ತು ಅಧ್ಯಾಪಕರ ಜೀವನ ನಿರ್ವಹಣೆಗೆ ರಾಜರು, ಅಧಿಕಾರಿಗಳು, ವರ್ತಕರು ಮತ್ತಿತರು ನೀಡಿದ ಹಣಕಾಸಿನ ವಿವರಗಳಿವೆ.

೮. ಶ್ರೀರಂಗಪಟ್ಟಣದಲ್ಲಿ ಪ್ರಾಗೈತಿಹಾಸಿಕ ನೆಲೆಯ ಶೋಧ (೧೯೯೮): ಕಾವೇರಿ ನದಿಯ ದ್ವೀಪವಾದ ಶ್ರೀರಂಗಪಟ್ಟಣದಲ್ಲಿ ಸೂಕ್ಷ್ಮಶಿಲಾಯುಗ ಕಾಲಕ್ಕೆ ಸೇರಿದ, ಅಲಗು, ಮೊನೆ, ಅರ್ಧಚಂದ್ರಾಕೃತಿಯ ಸೂಕ್ಷ್ಮ ಆಯುಧಗಳು ದೊರೆತಿವೆ. ಈ ಕುರಿತು ಅಧ್ಯಯನ ಮಾಡಿದ ಲೇಖನವಿದು. ಇತಿಹಾಸ ದರ್ಶನ ಸಂಚಿಕೆಯಲ್ಲಿ ಪ್ರಕಟವಾಗಿದೆ.

೯. ಕೊಂಗನ ಹೊಸೂರಿನ ಅಪ್ರಕಟಿತ ಮರದ ಬಾಗಿಲು ಶಾಸನ (೧೯೯೮): ಕರ್ನಾಟಕ ಇತಿಹಾಸ ಕಾಂಗ್ರೆಸ್‌ನ Studies in Karnataka History & Culture, Vol-4 ನಲ್ಲಿ ಪ್ರಕಟವಾಗಿದೆ. ಸ್ಥಳೀಯವಾಗಿ ದೊರೆಯುವ ಬೇವಿನ ಮರವನ್ನು ಬಳಸಿಕೊಂಡು ಸುಂದರವಾದ, ಸೂಕ್ಷ್ಮ ಕೆತ್ತನೆಗಳಿಂದ ಕೂಡಿದ ಮರದ ಬಾಗಿಲು ವಿಜಯನಗರೋತ್ತರ ಕಾಲದ ರಚನೆಗೆ ಉತ್ತಮ ಉದಾಹರಣೆಯಾಗಿದೆ. ಹರಪನಹಳ್ಳಿ ತಾಲ್ಲೂಕಿನ ಕೊಂಗನ ಹೊಸೂರಿನ ಆಂಜನೆಯ ದೇವಾಲಯದ ಗರ್ಭಗೃಹಕ್ಕೆ ಅಳವಡಿಸಿರುವ ಈ ಮರದ ಬಾಗಿಲಿನಲ್ಲಿ ಶಾಸನವಿದ್ದು, ಬಾಗಿಲಿನ ರಚನೆಯನ್ನು ಕುರಿತು ತಿಳಿಸುತ್ತದೆ.

೧೦. ಹೊಸಪೇಟೆಯ ಮೂಲನೆಲೆ ಬಿಸಲಹಳ್ಳಿ (೨೦೦೧): ಕರ್ನಾಟಕ ಸರ್ಕಾರದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯವು ಪ್ರಕಟಿಸಿರುವ ವಿಜಯನಗರ ಅಧ್ಯಯನ ಸಂಪುಟ-೬ರಲ್ಲಿ ಈ ಸಂಶೋಧನ ಲೇಖನ ಪ್ರಕಟಗೊಂಡಿದೆ. ಬಿಸಲಹಳ್ಳಿ ಎಂಬ ಪ್ರಾಚೀನ ಗ್ರಾಮ ಈಗಿನ ಹೊಸಪೇಟೆಯ ಮೂಲ ನೆಲೆಯಾಗಿತ್ತೆಂಬುದನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

೧೧. ವಿಜಯನಗರ ಮತ್ತು ಕುಮಾರರಾಮ (೨೦೦೨): ವಿಜಯನಗರ ಅಧ್ಯಯನ, ಸಂಪುಟ-೭ರಲ್ಲಿ ಪ್ರಕಟವಾಗಿರುವ ಈ ಲೇಖನವು ವಿಜಯನಗರ ಕಾಲದಲ್ಲಿ ಕುಮಾರರಾಮನನ್ನು ಕುರಿತು ರಚನೆಗೊಂಡ ದೇವಾಲಯ ಮತ್ತು ಸಾಹಿತ್ಯ ಕೃತಿಗಳ ಆಶಯವನ್ನು ಕುರಿತು ವಿವೇಚಿಸಲಾಗಿದೆ. ಹಾಗೂ ಕುಮಾರರಾಮನ ಪ್ರಭಾವವನ್ನು ಗುರುತಿಸಲಾಗಿದೆ.

೧೨. ಸಂಗಮ ಮನೆತನದ ಮೂಲನೆಲೆ ಕುರುಗೋಡು (೨೦೦೧): ಇತಿಹಾಸದರ್ಶನ, ಸಂಪುಟ-೧೬ರಲ್ಲಿ ಪ್ರಕಟಾಗಿರುವ ಈ ಲೇಖನದಲ್ಲಿ ವಿಜಯನಗರ ಸ್ಥಾಪಕರಾದ ಸಂಗಮ ಮನೆತನದ ಮೂಲ ನೆಲೆ ಕುರುಗೋಡು ಎಂದು ಗುರುತಿಸಲಾಗಿದೆ. ಹಂಪೆಗೆ ಸಮೀಪವಾಗಿರುವ ಕುರುಗೋಡು, ಚಾರಿತ್ರಿಕವಾಗಿ ಮಹತ್ವದ ಸ್ಥಳ. ದೇವಾಲಯ, ಸಾಂಗತ್ಯ, ಶಾಸನ ಮತ್ತು ಕೈಫಿಯತ್ತುಗಳ ಆಧಾರದ ಮೇಲೆ ಕುರುಗೋಡು ಸಂಗಮ ಮನೆತನದ ಮೂಲ ನೆಲೆಯಾಗಿತ್ತೆಂಬುದನ್ನು ಗ್ರಹಿಸಲಾಗಿದೆ.

**೧೭. ಪಿಎಚ್.ಡಿ ಮಾರ್ಗದರ್ಶನ**

| ಅಭ್ಯರ್ಥಿಗಳು | ಶೀರ್ಷಿಕೆ | ಪದವಿಘೋಷಿಸಿದ ದಿನಾಂಕ |
|---|---|---|



PDF created with pdfFactory trial version www.pdffactory.com

೧. ಡಾ.ಶರಣಬಸಪ್ಪ ಕೋಲ್ಕಾರ, ಕೊಪ್ಪಳ–ಹಂಪಿ ಪ್ರದೇಶದ ಪ್ರಾಗಿತಿಹಾಸ ಕಾಲದ ಕಲೆ (೨೦೦೨): ತುಂಗಭದ್ರಾನದಿಯ ಕೊಪ್ಪಳ – ಹಂಪಿ ಪ್ರದೇಶದಲ್ಲಿರುವ ಬೆಟ್ಟಗುಡ್ಡಗಳಲ್ಲಿ ಅಸಂಖ್ಯಾತ ಗವಿವರ್ಣ ಚಿತ್ರಗಳು ಪ್ರಸ್ತುತ ಸಂಶೋಧನೆಯಲ್ಲಿ ಬೆಳಕಿಗೆ ಬಂದಿವೆ. ಜೊತೆಗೆ ಗೆರೆ ಚಿತ್ರಗಳು ಸಹ ಕಂಡುಬಂದಿವೆ. ಸೂಕ್ಷ್ಮಶಿಲಾಯುಗ, ನವಶಿಲಾಯುಗ ಮತ್ತು ಬೃಹತ್ ಶಿಲಾಯುಗ ಕಾಲಕ್ಕೆ ಸೇರುವ ಈ ಚಿತ್ರಗಳು ಅಂದಿನ ಜನರ ಜೀವನ, ಮನರಂಜನೆ ಮತ್ತು ಆಶಯಗಳ ಕೈಗನ್ನಡಿಯಾಗಿದೆ. ಬೆಟ್ಟಗುಡ್ಡಗಳ ಪರಿಸರದಲ್ಲಿರುವ ಈ ಗುಹಾ ಚಿತ್ರಗಳು ಪ್ರಾಕೃತಿಕವಾಗಿ ಮೂಡಿಬಂದಿವೆ. ವಿಶೇಷವಾಗಿ ಕೆಂಪು ಬಣ್ಣದ ಚಿತ್ರಗಳು ಹೆಚ್ಚಿನ ಸಂಖ್ಯೆಯಲ್ಲಿವೆ. ಮನುಷ್ಯ, ಪ್ರಾಣಿಗಳು, ಬೇಟೆ, ಪಶುಪಾಲನೆ, ಸಮಾಧಿ, ನೃತ್ಯ ಮೊದಲಾದ ವಿಷಯಗಳನ್ನು ಒಳಗೊಂಡ ಈ ಚಿತ್ರಗಳು ಅಧ್ಯಯನ ಯೋಗ್ಯವಾಗಿದೆ.

೨. ಡಾ.ಎಸ್.ತಿಪ್ಪೇಸ್ವಾಮಿ, ರಕ್ಷಣಾ ವಾಸ್ತುಶಿಲ್ಪ – ಚಿತ್ರದುರ್ಗ ಜಿಲ್ಲೆ (೨೦೦೪): ಚಿತ್ರದುರ್ಗ ಜಿಲ್ಲೆಯು ಪ್ರಾಗಿತಿಹಾಸ ಕಾಲದಿಂದ ಮಹತ್ವ ಪಡೆದ ಪ್ರದೇಶ. ಮೌರ್ಯ, ಶಾತವಾಹನ ಕಾಲದಿಂದಲೂ ರಾಜಕೀಯ ವ್ಯವಸ್ಥೆಗೊಳಪಟ್ಟ ಈ ಪ್ರದೇಶದಲ್ಲಿ ರಕ್ಷಣೆಗೆ ಪ್ರಮುಖ ಸ್ಥಾನವಿದೆ. ಜಿಲ್ಲೆಯಲ್ಲಿ ಪ್ರಾಚೀನ ಕಾಲದಿಂದಲೂ ಕೋಟೆಗಳು ನಿರ್ಮಾಣವಾಗಿವೆ. ಈ ನಿರ್ಮಾಣ ಕಾರ್ಯಗಳು, ಟಿಪ್ಪುಸುಲ್ತಾನನ ಕಾಲದವರೆಗೂ ನಡೆದುಬಂದಿವೆ. ಚಿತ್ರದುರ್ಗದ ಕೋಟೆ ರಾಜ್ಯದಲ್ಲೆ ಪ್ರಮುಖವಾಗಿದೆ. ಜಿಲ್ಲೆಯಲ್ಲಿ ಅಸಂಖ್ಯಾತ ಕೋಟೆಗಳಿದ್ದು, ಅವು ವಿವಿಧ ಪ್ರಬೇಧಕ್ಕೆ ಸೇರಿದವುಗಳಾಗಿವೆ. ಈ ಎಲ್ಲ ಕೋಟೆಗಳ ಸಮಗ್ರ ಅಧ್ಯಯನ ನಡೆದಿದೆ. ಹಾಗೂ ರಕ್ಷಣಾ ಸಂಬಂಧಿ ಸ್ಮಾರಕಗಳನ್ನು ಸಹ ಅಧ್ಯಯನ ಮಾಡಲಾಗಿದೆ.

೩. ಡಾ.ಶಕುಂತಲ, ಚಿತ್ರದುರ್ಗ ಪಾಳೆಯಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪ (೨೦೦೮): ಕರ್ನಾಟಕದ ಕಲೆ ಮತ್ತು ವಾಸ್ತುಶಿಲ್ಪ ಕುರಿತ ಅಧ್ಯಯನವು ಸಾಮಾನ್ಯವಾಗಿ ವಿಜಯನಗರ ಕಾಲಕ್ಕೆ ನಿಲುಗಡೆಯಾಗುತ್ತದೆ. ಅದರ ಮುಂದುವರಿಕೆಯಾಗಿ ವಿಜಯನಗರೋತ್ತರ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಕುರಿತ ಅಧ್ಯಯನಗಳು ತೀರಾ ವಿರಳ. ಪ್ರಾದೇಶಿಕವಾಗಿ ಹಾಗೂ ಸ್ಥಳೀಯವಾಗಿ ಬೆಳೆದುಬಂದ ಕಲೆ ಮತ್ತು ವಾಸ್ತುಪರಂಪರೆಯನ್ನು ಉಪೇಕ್ಷಿಸಲಾಗಿದೆ. ಈ ಕೊರತೆಯನ್ನು ಹೋಗಲಾಡಿಸುವ ಉದ್ದೇಶದಿಂದ ಪ್ರಸ್ತುತ ಚಿತ್ರದುರ್ಗ ಪಾಳೆಯಗಾರರ ಕಾಲದ ಕಲೆ ಮತ್ತು ವಾಸ್ತುಶಿಲ್ಪ ಅಧ್ಯಯನವನ್ನು ಕೈಗೊಳ್ಳಲಾಯಿತು. ವಿಜಯನಗರ ಶೈಲಿಯ ಮುಂದುವರಿಕೆಯನ್ನು ಗುರುತಿಸಬಹುದು. ಆದರೆ ಭವ್ಯತೆ, ಅಲಂಕರಣ, ಗಾತ್ರ, ಪ್ರಮಾಣಗಳಲ್ಲಿ ಇಳಿಮುಖವನ್ನು ಕಾಣುತ್ತೇವೆ. ಇದಕ್ಕೆ ಪಾಳೆಯಗಾರರ ಕಾಲದ ರಾಜಕೀಯ ಅಸ್ಥಿರತೆ ಮತ್ತು ಆರ್ಥಿಕ ದುಃಸ್ಥಿತಿಗಳು ಕಾರಣವಾಗಿವೆ.

೦೪. ಡಾ. ಶಂಭೂಲಿಂಗವಾಣಿ, ರಕ್ಷಣಾ ವಾಸ್ತುಶಿಲ್ಪ–ಗುಲ್ಬರ್ಗಾ ಜಿಲ್ಲೆ (೨೦೧೦) : ಗುಲ್ಬರ್ಗಾ ಜಿಲ್ಲೆಯ ಆದಿ ಇತಿಹಾಸ ಕಾಲದಿಂದಲೂ ಚಾರಿತ್ರಿಕವಾಗಿ ಮಹತ್ವದ ಪ್ರದೇಶ. ಸನ್ನತಿ ಗೊಟ್ಟಂಗೊಟ್ಟ ಸ್ಥಳಗಳಲ್ಲಿ ಪ್ರಾಚೀನ ಕೋಟೆಗಳ ಅವಶೇಷಗಳು ಕಂಡುಬರುತ್ತವೆ. ಮಧ್ಯಕಾಲದಲ್ಲಿ ಬಹಮನಿ ಅರಸರ ಕಾಲದಲ್ಲೂ ಕೋಟೆ ಕೊತ್ತಲಗಳು ನಿರ್ಮಾಣಗೊಂಡಿವೆ. ಹೈದರಾಬಾದಿನ ನಿಜಾಮರ ಕಾಲದಲ್ಲಂತೂ ಗ್ರಾಮ ಗ್ರಾಮಗಳಲ್ಲಿ ರಕ್ಷಣಾ ನಿರ್ಮಾಣಗಳನ್ನು ಕಾಣುತ್ತೇವೆ. ಈ ಕುರಿತು ತಲಸ್ಪರ್ಶಿ ಅಧ್ಯಯನ ಮಾಡಲಾಗಿದೆ.

## ೧೮. ಎಂ.ಫಿಲ್ ಮಾರ್ಗದರ್ಶನ

**ಅಭ್ಯರ್ಥಿಗಳು ಶೀರ್ಷಿಕೆ ಪದವಿಘೋಷಿಸಿದ ದಿನಾಂಕ**

೧. ವಿರೂಪಾಕ್ಷಿ ಪೂಜಾರಹಳ್ಳಿ, ಬಳ್ಳಾರಿ ಜಿಲ್ಲೆಯಲ್ಲಿ ಕಲೆಕ್ಟರುಗಳ ಆಳ್ವಿಕೆ – ಒಂದು ಸಮೀಕ್ಷೆ (೧೮೦೦–೧೯೪೭) (೧೯೯೪) : ಬಳ್ಳಾರಿ ಜಿಲ್ಲೆಯ ಮದ್ರಾಸ್ ಸಂಸ್ಥಾನದಲ್ಲಿದ್ದು, ಬ್ರಿಟಿಷ್ ಅಧಿಕಾರಿಗಳ ಆಳ್ವಿಕೆಯನ್ನು ಗುರುತಿಸಲಾಗಿದೆ.

೨. ಉದಯಕುಮಾರ ಕೆ.ಸಿ., ಬೆಟ್ಟದಪುರ ಪರಿಸರದ ಪುರಾತತ್ವ ಅಧ್ಯಯನ (೨೦೦೮): ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿನ ಬೆಟ್ಟದಪುರ ಗ್ರಾಮದ ಪರಿಸರದಲ್ಲಿ ಪ್ರಾಗಿತಿಹಾಸ ಕಾಲದ ಕುರುಹುಗಳು, ದೇವಾಲಯ, ಶಾಸನ, ವೀರಗಲ್ಲು ಮೊದಲಾದ ಪ್ರಾಚ್ಯಾವಶೇಷಗಳು ಕಂಡುಬಂದಿವೆ. ಅವುಗಳನ್ನು ಪುರಾತತ್ವೀಯ ಮತ್ತು ಸಾಂಸ್ಕೃತಿಕ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಬೆಟ್ಟದ ಮೇಲಿರುವ ಮಲ್ಲಿಕಾರ್ಜುನ ದೇವಾಲಯ ಇಲ್ಲಿನ ಪ್ರಮುಖ ದೇವಾಲಯವಾಗಿದೆ.

೩. ರಾಘವೇಂದ್ರ, ಪಾವಗಡ ಪರಿಸದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ (೨೦೦೮): ತುಮಕೂರು ಜಿಲ್ಲೆಯ ಪಾವಗಡ ಬೆಟ್ಟಗುಡ್ಡ ಪರಿಸರಗಳಿಂದ ಕೂಡಿದೆ. ಪ್ರಾಗಿತಿಹಾಸ ಕಾಲದ ಕುರುಹುಗಳು, ದೇವಾಲಯ, ಮೂರ್ತಿಶಿಲ್ಪ, ಕೋಟೆ, ವೀರಗಲ್ಲು ಹಾಗೂ ನೀರಿನ ತಾಣಗಳಿಂದ ಕೂಡಿದ್ದು, ಅಧ್ಯಯನ ಯೋಗ್ಯವಾಗಿವೆ. ಇವುಗಳನ್ನು ಕುರಿತು ಪುರಾತತ್ವೀಯ ನೆಲೆಯಲ್ಲಿ ಅಧ್ಯಯನ ಮಾಡಲಾಗಿದೆ. ಈ ಮೂಲಕ ಪಾವಗಡ ಪರಿಸರದ ಐತಿಹಾಸಿಕ ಮಹತ್ವವನ್ನು ಗುರುತಿಸುವ ಪ್ರಯತ್ನ ಇಲ್ಲಿದೆ.

೪. ಮುನಿರತ್ನಮ್ಮ, ನಂದಿಬೆಟ್ಟ ಪರಿಸರದ ಇತಿಹಾಸ ಮತ್ತು ಪುರಾತತ್ವ ಅಧ್ಯಯನ (೨೦೦೯): ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿರುವ ನಂದಿಬೆಟ್ಟ ಪರಿಸರದಲ್ಲಿ ಪ್ರಾಚೀನ ನೆಲೆಗಳು, ದೇವಾಲಯಗಳು, ಕೆರೆಕಟ್ಟೆ ಇದ್ದು ಅವುಗಳ ಪುರಾತತ್ವೀಯ ಅಧ್ಯಯನವನ್ನು ಮಾಡಲಾಗಿದೆ. ಬೆಟ್ಟದಲ್ಲಿರುವ ಬ್ರಿಟಿಷರ ಕಾಲದ ಕಟ್ಟಡಗಳು ಸಹ ವಾಸ್ತುಶಿಲ್ಪ ದೃಷ್ಟಿಯಿಂದ ಅಧ್ಯಯನ ಯೋಗ್ಯವಾಗಿವೆ. ನಂದಿಬೆಟ್ಟ ಸಮೀಪದ ರಾಜಘಟ್ಟದಲ್ಲಿ ಇಟ್ಟಿಗೆ ನಿರ್ಮಿತ ಬೌದ್ಧ ವಿಹಾರವೊಂದು ಬೆಳಕಿಗೆ ಬಂದಿವೆ. ಹೀಗಾಗಿ ನಂದಿಬೆಟ್ಟ ಪರಿಸರವು ಪುರಾತತ್ವೀಯ ಮಹತ್ವ ಪಡೆದಿದೆ.

## ೧೯. ಪಡೆದ ಪ್ರಶಸ್ತಿ – ಮನ್ನಣೆ



PDF created with pdfFactory trial version www.pdffactory.com

**೨೦. ಶೈಕ್ಷಣಿಕ ಉದ್ದೇಶಕ್ಕಾಗಿ (ವಿಶ್ವವಿದ್ಯಾಲಯ ಹೊರತುಪಡಿಸಿ)**
**ನಿರ್ವಹಿಸಿದ ಯೋಜನೆಗಳು (೫೦ ಪದಗಳ ಸಾರಾಂಶ)**

೧. ಕೃಷ್ಣ ಮೇಲ್ದಂಡೆ ಮುಳಗಡೆ ಪ್ರದೇಶದಲ್ಲಿ ಕ್ಷೇತ್ರಕಾರ್ಯ ಕೈಗೊಂಡು ಬಾಗಲಕೋಟೆಯ ವಸ್ತುಸಂಗ್ರಹಾಲಯಕ್ಕೆ ಪ್ರಾಚ್ಯಾವಶೇಷಗಳನ್ನು ಸಂಗ್ರಹಿಸುವ ಯೋಜನೆಯಲ್ಲಿ ಕರ್ತವ್ಯ ನಿರ್ವಹಿಸಲಾಗಿದೆ.

**೨೧. ನಿರ್ವಹಿಸಿದ ಇತರೆ ಕೆಲಸಗಳು**

೧. **ಆಡಳಿತಾತ್ಮಕ ಕೆಲಸಗಳು**

೨. **ಹೆಚ್ಚಿನ ಜವಾಬ್ದಾರಿಗಳು**

೧. ವಿಭಾಗದ ಮುಖ್ಯಸ್ಥ ೨೦೦೩–೨೦೦೫
೨. ಸಂಚಾಲಕ, ದೇವರ ದಾಸಿಮಯ್ಯ ಅಧ್ಯಯನ ಪೀಠ, ೨೦೦೭–೨೦೧೦



PDF created with pdfFactory trial version www.pdffactory.com